ಆ)

1. ದೊಡ್ಡ ಪ್ರಮಾಣದ ಕೈಗಾರಿಕೆಗಳು
   ಅ) ಸರ್ಕಾರದ ವತಿಯಿಂದ - ಇಲ್ಲ
   ಆ) ಖಾಸಗಿ ವತಿಯಿಂದ - ಇಲ್ಲ
2. ಸಣ್ಣ ಪ್ರಮಾಣದ ಕೈಗಾರಿಕೆಗಳು
   ಅ) ಸರ್ಕಾರದ ವತಿಯಿಂದ - ಇಲ್ಲ
   ಆ) ಖಾಸಗಿ ವತಿಯಿಂದ - 573

ಕೈಗಾರಿಕೆಗಳಲ್ಲಿ ಎಸ್.ಸಿ., ಎಸ್.ಟಿ.ಯವರಿಗೆ ಉದ್ಯೋಗ ಮೀಸಲಾತಿ.

1473 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸ್ವಾಧೀನದಲ್ಲಿರುವ ಕೈಗಾರಿಕೆಗಳಲ್ಲಿ ಕಾರ್ಖಾನೆಗಳಲ್ಲಿ ಹರಿಜನ - ಗಿರಿಜನರಿಗೆ ಮೀಸಲಾತಿಯನ್ನು ವಿವಿಧ ಉದ್ಯೋಗಳಲ್ಲಿ ಕೊಡಲು ಸರ್ಕಾರ ಕಾನೂನನ್ನು ಮಾಡಿರುತ್ತದೆಯೇ?

ಆ) ಹಾಗಿದ್ದಲ್ಲಿ ಇದನ್ನು ಕ್ರಮವಾಗಿ ಜಾರಿಗೆ ತರದವರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಈ ಕೈಗಾರಿಕೆಗಳಲ್ಲಿ ಕೆಲಸಮಾಡುತ್ತಿರುವ ಹರಿಜನ ಗಿರಿಜನರಿಗೆ ಬಡ್ತಿಯಲ್ಲಿ ಮೀಸಲಾತಿಯನ್ನು ತರಲು ಸರ್ಕಾರ ಕಾನೂನು ಮಾಡಿರುತ್ತದೆಯೇ

ಈ) ಹಾಗಿಲ್ಲದಿದ್ದಲ್ಲಿ, ಇವರ ಬಡ್ತಿಗೆ ಯಾವ ಕ್ರಮ ಅನುಸರಿಸಲಾಗುತ್ತಿದೆ. ಹಾಗೂ ಈ ಬಗ್ಗೆ ಸರ್ಕಾರದ ನಿಯಮವನ್ನು ಅನುಸರಿಸಿದ ಕೈಗಾರಿಕೆಗಳು ಯಾವುವು?

ಉ) ಕೈಗಾರಿಕೆಗಳಲ್ಲಿ ಹರಿಜನ ಗಿರಿಜನರ ಮೀಸಲಾತಿಯ ಕೊರತೆ ಬಿದ್ದಿದ್ದರೆ ಇದನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ನಜೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಸರ್ಕಾರವು ಈ ಬಗ್ಗೆ ಸುತ್ತೋಲೆ ಸಂಖ್ಯೆ ಡಿಪಿಎಆರ್ 30 ಎಸ್‌ಬಿಸಿ 82 ದಿನಾಂಕ 22-11-82 ರಂದು ಹೊರಡಿಸಲಾಗಿದೆ. ಅಲ್ಲದೆ ಪತ್ರ ಸಂಖ್ಯೆ ಡಿಪಿಎಆರ್ (ಬಿಪಿಇ) 91 ಎನ್‌ಪಿಯು 82 ದಿನಾಂಕ 6-3-82ರಲ್ಲಿ ನಿರ್ದೇಶನಗಳನ್ನು ಸಹ ನೀಡಲಾಗಿದೆ.

ಆ) ಸರ್ಕಾರವು ಈ ಬಗ್ಗೆ ಮಾಸಿಕ ಮತ್ತು ತ್ರೈಮಾಸಿಕ ವರದಿಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ.

ಇ) ಹೌದು ಸುತ್ತೋಲೆ ಸಂಖ್ಯೆ ಸಿಐ. 59 ಪಿಯುಎಂ 78 ದಿನಾಂಕ 20 : 4-1-5-79ರಂದು ಹೊರಡಿಸಲಾಗಿದೆ.

ಈ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ನೇಮಕ ತಡೆ ಆದೇಶವನ್ನು ಸಡಿಲಗೊಳಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಲು ಸುತ್ತೋಲೆ ಮೂಲಕ ನಿರ್ದೇಶನ ನೀಡಲಾಗಿದೆ.

ಹೊಳೆಹೊನ್ನೂರು ವಿಭಾಗದಲ್ಲಿ ಸಕ್ಕರ ಕಾರ್ಖಾನೆ ಸ್ಥಾಪನೆ

1472 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕು ಸುಮಾರು ಶೇ. 80 ರಷ್ಟು ನೀರಾವರಿ ಪ್ರದೇಶವಾಗಿದ್ದು, ಈಗ ಹಾಲಿ ಭದ್ರಾವತಿಯಲ್ಲಿರುವ ಸಕ್ಕರೆ

ಕಾರ್ಖಾನೆಯು ರೈತರ ಕಬ್ಬನ್ನು ಅರೆಯಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಹೊಳಿಹೊನ್ನೂರು ವಿಭಾಗಕ್ಕೆ ಸಂಬಂಧಪಟ್ಟ ಮಂಗೋಟೆಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಲು ಸರ್ಕಾರದಿಂದ 25 ಎಕರೆ ಜಮೀನನ್ನು ಕಾದಿರಿಸಿರುವುದು ನಿಜವಲ್ಲವೆ, ಹಾಗಿದ್ದಲ್ಲಿ, ಇಲ್ಲಿ ಸರ್ಕಾರದವರು ಸಕ್ಕರೆ ಕಾರ್ಖಾನೆಯನ್ನು ತೆರೆಯಲಾಗುವುದೇ?

ಇ) ಹಾಗಿಲ್ಲದಿದ್ದಲ್ಲಿ, ಸಹಕಾರ ಸಂಘದವತಿಯಿಂದಾಗಲೀ ಅಥವಾ ಖಾಸಗಿಯವರಿಂದಾಗಲೀ ಅಥವಾ ಯಾವುದಾದರು ಕಂಪನಿಯಿಂದಾಗಲೀ ಕಾರ್ಖಾನೆ ಸ್ಥಾಪನೆ ಮಾಡಲು ಯೋಜನೆ ಮಾಡಲಾಗಿದೆಯೇ?

ಈ) ಮಾಡುವುದಿದ್ದರೆ, ಯಾವಾಗ, ಎಷ್ಟು ಅವಧಿಯೊಳಗೆ ಮಾಡಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ. ಸಧ್ಯಕ್ಕೆ ಇದರ ಬಗ್ಗೆ ಸರ್ಕಾರದಲ್ಲಿ ಯಾವ ಪ್ರಸ್ತಾವನೆಯೂ ಬಂದಿರುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಮಾರಾಟ ವ್ಯವಹಾರ ಇಲ್ಲದ ಚಿಕ್ಕ ಅಕ್ಕಿ ಗಿರಣಿಗಳಿಗೆ ಸೇಲ್ಸ್ ಟ್ಯಾಕ್ಸ್ ರಿಜಿಸ್ಟ್ರೇಶನ್ ವಿನಾಯತಿ

1488 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾರಾಟ ತೆರಿಗೆ ಇಲಾಖೆಯ ವ್ಯಾಪ್ತಿ ಮಾರಾಟ ಮಾಡುವವರಿಗೆ ಮಾತ್ರ ಸೀಮಿತವಲ್ಲವೇ.

ಆ) ಹಾಗಿದ್ದಲ್ಲಿ, ಯಾವುದೇ ಮಾರಾಟ ವ್ಯವಹಾರ ಮಾಡದೆ ಕೇವಲ ರೈತರ ಭತ್ತವನ್ನು ಬಾಡಿಗೆಗೆ ಅಕ್ಕಿ ಮಾಡಿಕೊಡುವ ಚಿಕ್ಕ ಅಕ್ಕಿ ಮಿಲ್(ಹಲ್ಲರ್)ಗಳವರು ಸಹಾ ಸೇಲ್ಸ್ ಟ್ಯಾಕ್ಸ್ ರಿಜಿಸ್ಟ್ರೇಷನ್ ಮಾಡಿಸಬೇಕೆಂಬ ನಿರ್ಬಂಧ ಇರುವುದೇಕೆ?

ಇ) ತೀರ ಚಿಕ್ಕ ಉದ್ದಿಮೆದಾರರಿಗೆ ಆಗುವ ಈ ರೀತಿಯ ಸಂಕಷ್ಟ ನಿವಾರಣೆಗೆ ಸರ್ಕಾರ ಸೂಕ್ತ ವಿನಾಯತಿ ನೀಡುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು

ಆ) ಈ ಸರಕಿನಿಂದ ಸಮರ್ಪಕ ತೆರಿಗೆ ಪಾವತಿಯನ್ನು ಖಾತ್ರಿ ಪಡಿಸಿಕೊಳ್ಳಲೋಸುಗ, ಅಕ್ಕಿ ಮಿಲ್ಲಿನ ಮಾಲೀಕರು ಯಾವುದೇ ಖರೀದಿ ಅಥವಾ ಮಾರಾಟದ ವ್ಯವಹಾರವನ್ನು ಪರಿಗಣಿಸದ ಕ.ಮಾ.ತ. ಕಾಯಿದೆ 1957ರ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕಾಗಿದೆ.

ಇ) ಈ ನಿಯಮದ ಪರಿಪಾಲನೆಯು ಯಾವುದೇ ಸಣ್ಣ ಅಕ್ಕಿ ಮಿಲ್ಲಿನ ಘಟಕಗಳ ಮಾಲೀಕರಿಗೆ ತೊಂದರೆಯಾಗುವ ರೀತಿಯಲ್ಲಿ ಪರ್ಯಾವಸಾನವಾಗದಿರುವ ಹಾಗೆ ಇಲಾಖಾ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ.